ದಿನಾಂಕ 14-07-2026 ರಂದು ಸಾಕ್ಷಿಯವರಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮಧ್ಯಂತರ ಅರ್ಜಿಯ ಆದೇಶದ ಮೇರೆಗೆ ಮುಂದುವರಿದ ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ ಆರ್ ಎ. ಆರ್ ವಕೀಲರಿಂದಃ**

ದಿಃ 04-11-2023 ರ ಆಸ್ಪತ್ರೆ ಬಿಡುಗಡೆ ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿಪಿ.21 ಎಂದು, ದಿಃ 10-12-2023 ರ ಆಸ್ಪತ್ರೆ ಬಿಡುಗಡೆ ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿಪಿ.22 ಎಂದು ಗುರುತಿಸಲಾಯಿತು. ಆದ್ದರಿಂದ ಅರ್ಜಿಯನ್ನು ಪುರಸ್ಕರಿಸಿ ಆದೇಶ ಮಾಡಬೇಕಾಗಿ ಕೋರಿಕೊಳ್ಳುತ್ತೇನೆ.

**ಪಾಟೀ ಸವಾಲು - 2 ನೇ ಎದುರುದಾರರ ಪರ ಶ್ರೀ ಎಂ. ಆರ್ ವಕೀಲರಿಂದಃ**

ಅಪಘಾತ ದಿವಸ ನಾನೇ ದ್ವಿ ಚಕ್ರ ವಾಹನವನ್ನು ಚಲಾಯಿಸುತ್ತಿದ್ದು, ನನ್ನ ಜೊತೆ ಬೇರೆ ಯಾರು ಇರಲಿಲ್ಲ. ದ್ವಿ ಚಕ್ರ ವಾಹನ ನನಗೆ ಸೇರಿದ್ದು. ದ್ವಿ ಚಕ್ರ ವಾಹನ ಚಲಾಯಿಸಲು ನನ ಬಳಿ ವಾಹನ ಚಾಲನಾ ಪರವಾನಿಗೆ ಇದೆ. ನಾನು ಆ ದಿನ ಹೆಲ್ಮೆಟ್ ಧರಿಸಿರಲಿಲ್ಲ ಎಂದರೆ ಸರಿಯಲ್ಲ. ನನ್ನ ಪ್ರಕಾರ ನನಗೆ ಡಿಕ್ಕಿ ಪಡಿಸಿದ ವಾಹನ ನನ್ನ ಹಿಂದಿನಿಂದ ಬಂದಿತ್ತು. ಅಪಘಾತ ಪೂರ್ವದಲ್ಲಿ ಹಿಂದಿನಿಂದ ಬಂದ ವಾಹನ ನಾನು ಗಮನಿಸಿಲ್ಲ. ನನ್ನ ಬಲ ಹಿಂಭಾಗಕ್ಕೆ ತಾಗಿರುತ್ತದೆ. ಆ ದಿನ ನಾನು ಹೋಗುತ್ತಿದ್ದ ರಸ್ತೆ ದ್ವಿ ಪಥ ರಸ್ತೆಯಾಗಿರುತ್ತದೆ. ನನಗೆ ಡಿಕ್ಕಿ ಪಡಿಸಿದ ವಾಹನ ಯಾವುದು ಎಂದು ನಾನು ಬಿದ್ದ ನಂತರ ಗೊತ್ತಾಯಿತು. ಹಿಂದಿನಿಂದ ಬಂದ ವಾಹನವನ್ನು ನಾನು ಸೈಡ್ ಮಿರರಿನಲ್ಲಿ ಗಮನಿಸಿರಲಿಲ್ಲ. ಹಿಂದಿಸಿಂದ ಬಂದ ವಾಹನವನ್ನು ಗಮನಿಸಿಸದೆ ನನ್ನ ತಪ್ಪಿ ದಿನಿಂದೇ ಈ ಅಪಘಾತವಾಗಿರುತ್ತದೆ ಎಂದರೆ ಸರಿಯಲ್ಲ.

ನನ್ನ ಸಂಪೂರ್ಣ ಚಿಕಿತ್ಸೆ ಆದರ್ಶ ಆಸ್ಪತ್ರೆಯಲ್ಲಿ ಆಗಿರುತ್ತದೆ. ಈಗಲೂ ನನ್ನ ಚಿಕಿತ್ಸೆ ಚಾಲ್ತಿಯಲ್ಲಿದೆ. ಈಗಲೂ ನನ್ನ ಚಿಕಿತ್ಸೆ ಚಾಲ್ತಿಯಲ್ಲಿ ಇದ್ದ ಕಾರಣ ನಿಪಿ 20 ರಲ್ಲಿ ತೋರಿಸಿದ ಅಂಗನ್ಯೂನತೆಯ ಪ್ರಮಾಣವನ್ನು ನಿರ್ಧರಿಸಲು ಸಾಧ್ಯವಿಲ್ಲ ಎಂದರೆ ಸರಿ. ನಾನು ಮೂರು ಬಾರಿ ಒಳ ರೋಗಿಯಾಗಿ ದಾಖಲಾಗಿದ್ದೆ. ಮೂರು ಬಾರಿ ಅಪಘಾತಕ್ಕೆ ಸಂಬಂಧಿಸಿದ ಗಾಯಗಳಿಗೋಸ್ಕರ ದಾಖಲಾಗಿರುತ್ತೇನೆಂದು ತೋರಿಸಲು ಸಾಧ್ಯವಿಲ್ಲ ಎಂದರೆ ಸರಿ. ನಿಪಿ 11 ರಿಂದ 19 ಅಪಘಾತಕ್ಕೆ ಸಂಬಂದಪಟ್ಟ ಬಿಲ್ಲುಗಳು ಅಲ ಎಂದರೆ ಸರಿಯಲ್ಲ. ಸದ್ರಿ ಬಿಲ್ಲುಗಳನ್ನು ಸೃಷ್ಟಿ ಮಾಡಿ ಹಾಕಿರುತ್ತೇನೆ ಎಂದರೆ ಸರಿಯಲ್ಲ. ನನಗೆ ಭವಿಷ್ಯದ ಚಿಕಿತ್ಸೆ ಬಾಕಿ ಇಲ್ಲ ಎಂದರೆ ಸರಿಯಲ್ಲ.

ನನಗೆ 35 ಸಾವಿರ ಸಂಪಾದನೆ ಇತ್ತು ಎಂದು ತೋರಿಸಲು ಯಾವುದೇ ದಾಖಲೆ ಇರುವುದಿಲ್ಲ. ನಾನು ಅಪಘಾತ ಸಮಯದಲ್ಲಿ ಯಾವುದೇ ಸೇಲ್ಸ್ ಮ್ಯಾನ್ ಆಗಿ ಕೆಲಸ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ಅಪಘಾತದಿಂದ ನನಗೆ ಯಾವುದೇ ಆರ್ಥಿಕ ನಷ್ಟ ಸಂಬವಿಸಿಲ್ಲ ಎಂದರೆ ಸರಿಯಲ್ಲ. ವೈದ್ಯಕೀಯ ವೆಚ್ಚಕ್ಕೆ ಸಂಬಂದಪಟ್ಟಂತೆ ಯಾವುದೇ ಇಲಾಖೆಯಿಂದ ಮರುಪಾವತಿಯಾಗಿ ಪಡೆದುಕೊಂಡಿರುವುದಿಲ್ಲ.

ನೀವು ಅರ್ಜಿ ಹಾಗೂ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಕಾಣಿಸಿರುವಷ್ಟು ಹಣವು ಔಷಧಿಗೆ, ಆಹಾರಕ್ಕೆ, ಒಡಾಟಕ್ಕೆ ಪರಿಚಾರಕರಿಗೆ ಖರ್ಚಾಗಿಲ್ಲವೆಂದರೆ ಸರಿಯಲ್ಲ. ಅದನ್ನು ತೋರಿಸಲು ಯಾವುದೇ ದಾಖಲೆ ಇಲ್ಲ ಎಂದರೆ ಸರಿ. ಅಪಘಾತ ನನ್ನ ತಪ್ಪಿನಿಂದ ಆಗಿರುವ ಕಾರಣ 2 ನೇ ಎದುರುದಾರರು ಯಾವುದೇ ಪರಿಹಾರ ನೀಡಲು ಬಾಧ್ಯಸ್ದರಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ : ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸ.ಇದೆ ಎಂದು ಒಪ್ಪಿದರು

1 ನೇ ಹೆ.ಹಿ.ಸಿ.ನ್ಯಾ.ಮತ್ತು ಎಂ.ಎ.ಸಿ.ಟಿ.
ಉಡುಪಿ.